ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 29.03.2023.**

**ಮುಂದುವರೆದ ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಿಂದಃ**

6) ದಿನಾಂಕಃ 04.03.2016 ರಂದು ಪ್ರತಿವಾದಿ ರೂಪಾ ನಿಪಿ-1 MOU ವನ್ನು ಟೈಪ್ ಮಾಡಿಸಿಕೊಂಡು ಅಪರಾಹ್ನ 12.00 ಘಂಟೆಗೆ ನನ್ನ ಮನೆಗೆ ಬಂದಿದ್ದರು ಎಂದರೆ ಸರಿ. ಆ ದಿನ ಸಾಕ್ಷಿಗಳಾದ ರೇವಣ್ಣ ಮತ್ತು ಶಾಂತಾ ನಮ್ಮ ಮನೆಗೆ ಎಷ್ಟು ಘಂಟೆಗೆ ಬಂದಿದ್ದರು ಎಂದರೆ ಅವರು ಬೇರೆ ಏನೋ ಕೆಲಸದ ಮೇಲೆ ಅಪರಾಹ್ನ 12.30 ಘಂಟೆಗೆ ಬಂದಿದ್ದರು. ಪ್ರತಿವಾದಿಯು ನಿಪಿ-1 ರ ಸ್ಟ್ಯಾಂಪ್ ಪತ್ರವನ್ನು ಎಲ್ಲಿಂದ ತಂದಿದ್ದರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ರೂಪಾ ರವರು ನಿಪಿ-1 ನ್ನು ಎಲ್ಲಿ ಟೈಪ್ ಮಾಡಿಸಿದ್ದರು ಎಂದು ನಾನು ಕೇಳಲಿಲ್ಲ. ನಿಪಿ-1 ನ್ನು ಇದೇ ಪ್ರಕಾರ ಟೈಪ್ ಮಾಡಿಸುವಂತೆ ನಾನು ಹೇಳಿರಲಿಲ್ಲ ಎಂದರೆ ಹೇಳಿದ್ದೆ, ಹಣ ಕೊಟ್ಟ ಬಗ್ಗೆ ಬರೆಯಬೇಕೆಂದು ತಿಳಿಸಿದ್ದೆ. ನಾನು ಪ್ರತಿವಾದಿಗೆ ನೇರವಾಗಿ ನಿಪಿ-1 ರಲ್ಲಿ ನಾನು ಹೇಳುವ ವಿವರಗಳನ್ನು ಟೈಪ್ ಮಾಡಿಸುವಂತೆ ಹೇಳಿದ್ದೆ. ನಾನು ದಿನಾಂಕಃ 01.03.2016 ರಂದು ಪ್ರತಿವಾದಿ ನನ್ನ ಬಳಿಗೆ ಹಣ ಪಡೆದುಕೊಳ್ಳಲು ಬಂದಾಗ ನಾನು ಈ ವಿವರಗಳನ್ನು ಆಕೆಗೆ ಹೇಳಿದ್ದೆ. ಆಗ ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ತಾಯಿ ಇದ್ದೆವು. ಸದರಿ ದಿನಾಂಕದಂದು ಸಾಕ್ಷಿದಾರರು ಹಾಜರಿರಲಿಲ್ಲ ಎಂದರೆ ಸರಿ. ದಿನಾಂಕಃ 01.03.2016 ರಂದು ಪ್ರತಿವಾದಿಯಿಂದ ಕರಾರು ಅಥವಾ MOU ವನ್ನು ಪಡೆದುಕೊಳ್ಳಲು ನನಗೆ ತೊಂದರೆ ಇರಲಿಲ್ಲ ಎಂದರೆ ಪ್ರತಿವಾದಿಯು ಯಾವುದೇ ದಾಖಲೆ ಬರೆದುಕೊಡಲು ಆ ದಿನ ಸಿದ್ಧವಾಗಿದ್ದರು, ನಾನೇ ಪ್ರತಿವಾದಿಗೆ ಸದರಿ MOU ವನ್ನು ಪ್ರತಿವಾದಿಯೇ ರೆಡಿ ಮಾಡಿಸಿಕೊಂಡು ಬರುವಂತೆ ಹೇಳಿದ್ದೆ. ದಿನಾಂಕಃ 01.03.2016 ರಂದು ಮಾತುಕತೆಯಾದ ಸಮಯದಲ್ಲಿ ಸಾಕ್ಷಿಗಳಾದ ರೇವಣ್ಣ ಮತ್ತು ಶಾಂತಾ ಹಾಜರಿರಲಿಲ್ಲ ಎಂದರೆ ಸರಿ.

ರಾಜಾಜಿನಗರದಿಂದ ನಾನು ವಾಸ ಮಾಡುವ ಸ್ಥಳ ಎಷ್ಟು ದೂರವಾಗುತ್ತದೆ ಎಂದು ನನಗೆ ಗೊತ್ತಿಲ್ಲ. ರಾಜಾಜಿನಗರದಿಂದ ನಾನು ಇರುವ ಸ್ಥಳಕ್ಕೆ ಪ್ರಯಾಣ ಮಾಡಲು ಎಷ್ಟು ಸಮಯ ಬೇಕಾಗುತ್ತದೆ ಎಂದರೆ ಟ್ರಾಫಿಕ್ ಇರುವ ಕಾರಣ ನಿಖರವಾಗಿ ಎಷ್ಟು ಸಮಯ ಬೇಕಾಗುತ್ತದೆ ಎಂದು ಹೇಳಲು ಆಗುವುದಿಲ್ಲ. ಅಲ್ಲಿಂದ ಪ್ರಯಾಣ ಮಾಡಲು 35 ನಿಮಿಷದಿಂದ 45 ನಿಮಿಷ ಬೇಕಾಗುತ್ತದೆ ಎಂದರೆ ಆ ರೀತಿ ಹೇಳಲು ಆಗುವುದಿಲ್ಲ.

7) ನಿಪಿ-1 ಸ್ಟ್ಯಾಂಪ್ ಪೇಪರನ್ನು ಪ್ರತಿವಾದಿ ಯಾವುದೇ ಕಾರಣಕ್ಕೂ ಖರೀದಿ ಮಾಡಿಲ್ಲ ಎಂದರೆ ಅವರೇ ಖರೀದಿ ಮಾಡಿದ್ದಾರೆ. ನಿಪಿ-1 ರಲ್ಲಿ ಬರೆದಿರುವ ಸಂಗತಿಗಳನ್ನು ಪ್ರತಿವಾದಿ ಹೇಳಿ ಬರೆಯಿಸಿಲ್ಲ ಮತ್ತು ಪ್ರತಿವಾದಿಗೆ ಅವುಗಳ ಬಗ್ಗೆ ಗೊತ್ತಿಲ್ಲ ಎಂದರೆ ಪ್ರತಿವಾದಿಯೇ ಹೇಳಿ ಬರೆಯಿಸಿದ್ದಾರೆ. ನಿಪಿ-1 ರಲ್ಲಿ ಅದನ್ನು ತಯಾರಿಸಿದ ಪತ್ರ ಬರಹಗಾರರ ಹೆಸರಾಗಲೀ ಸಹಿಯಾಗಲೀ ಇಲ್ಲವೆಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಯಾವುದೇ ದಾಖಲೆಗೆ ಪತ್ರ ಬರಹಗಾರರ ಹೆಸರು ಮತ್ತು ಸಹಿ ಇರಬೇಕು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ ಮೊದಲ ಬಾರಿ ನನಗೆ ಯಾವ ದಿನಾಂಕದಂದು ಮತ್ತು ಯಾವ ಸ್ಥಳದಲ್ಲಿ ಸಿಕ್ಕಿದ್ದರು ಎಂದರೆ ನನಗೆ ನೆನಪಿಲ್ಲ, ಪ್ರತಿವಾದಿ ನನ್ನನ್ನು ಹಲವಾರು ಬಾರಿ ಭೇಟಿ ಮಾಡಿದ್ದಾರೆ. ಪ್ರತಿವಾದಿಯು ನನಗೆ ಸಂಜಯ ನಗರದ ಅವರ ಆಫೀಸಿನಲ್ಲಿ ಸಿಕ್ಕಿದ್ದರು, ಅಲ್ಲಿ ಅವರನ್ನು ನೋಡಿದ್ದೇನೆ, ಸದರಿ ಆಫೀಸ್ ರಿಯಲ್ ಎಸ್ಟೇಟ್ ಆಫೀಸ್ ಎಂದು ನನಗೆ ಹೇಳಿದ್ದರು. ನಾನು ಸದರಿ ಆಫೀಸಿಗೆ ಯಾವ ದಿನಾಂಕದಂದು ಹೋಗಿದ್ದೆ ಎಂದು ನನಗೆ ನೆನಪಿಲ್ಲ. ನಾನು ಸದರಿ ಆಫೀಸು ಇರುವ ಸ್ಥಳವನ್ನು ಬೇಕಾದರೆ ತೋರಿಸಬಲ್ಲೆ. ನಾನು ಅಲ್ಲಿಗೆ

ಹೋಗಿದ್ದು ನಿಜವೇ ಆಗಿದ್ದಲ್ಲಿ ಅದು ಯಾವ ಮೇನ್ ನಲ್ಲಿ ಯಾವ ಕ್ರಾಸ್ ನಲ್ಲಿ ಇದೆ ಎಂದು ಹೇಳಲು ಸಾಧ್ಯವಾಗುತ್ತಿತ್ತು ಎಂದರೆ ಸರಿಯಲ್ಲ.

8) ನಾನು ರೂ.20 ಲಕ್ಷ ಕೊಟ್ಟ ಬಗ್ಗೆ ನನ್ನ ಆದಾಯ ತೆರಿಗೆ ಮಾಹಿತಿಯಲ್ಲಿ ತೋರಿಸಿಲ್ಲ. ರೂ.50 ಸಾವಿರಕ್ಕೆ ಮೇಲ್ಪಟ್ಟ ಹಣದ ವ್ಯವಹಾರವನ್ನು ಡಿ.ಡಿ. ಅಥವಾ ಚೆಕ್ ಮೂಲಕ ಮಾಡಬೇಕು ಎಂದರೆ ಆ ರೀತಿ ಯಾವ ಕಾನೂನು ಇದೆ ಎಂದು ನನಗೆ ಗೊತ್ತಿಲ್ಲ, ಈಗ ಆ ರೀತಿ ಇದೆ ಎಂದು ಗೊತ್ತು. 2008 ರಲ್ಲೂ ಕೂಡ ರೂ.50 ಸಾವಿರಕ್ಕೆ ಮೇಲ್ಪಟ್ಟ ಹಣದ ವ್ಯವಹಾರವನ್ನು ಡಿ.ಡಿ. ಅಥವಾ ಚೆಕ್ ಮೂಲಕ ಮಾಡಬೇಕು ಎಂದು ನಿಯಮವಿತ್ತು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯನ್ನು ನನಗೆ ಪರಿಚಯ ಮಾಡಿಸಿದ ಚಂದ್ರಶೇಖರ ದೊಡ್ಡಬಳ್ಳಾಪುರದವರು, ಅವರು ಸಂಜಯ ನಗರಕ್ಕೆ ಸಮೀಪದಲ್ಲಿ ಇರುವ ಡಾಲರ್ಸ್ ಕಾಲನಿಯಲ್ಲಿ ವಾಸ ಮಾಡುತ್ತಾರೆ. ಚಂದ್ರಶೇಖರ ನನಗೆ ಸ್ನೇಹಿತ ಮತ್ತು ದೂರದ ಸಂಬಂಧಿಕ. ಸದರಿ ಚಂದ್ರಶೇಖರ ರವರನ್ನು ಈ ದಾವೆಯಲ್ಲಿ ಸಾಕ್ಷಿಯಾಗಿ ವಿಚಾರಣೆ ಮಾಡಲು ನನಗೆ ತೊಂದರೆ ಇಲ್ಲ. ಪ್ರತಿವಾದಿಗೆ ಸದರಿ ಚಂದ್ರಶೇಖರ ಎಷ್ಟು ವರ್ಷಗಳಿಂದ ಪರಿಚಯವಿದ್ದಾರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಚಂದ್ರಶೇಖರ ಎನ್ನುವವರು ಪರಿಚಯವಿಲ್ಲ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಪ್ರತಿವಾದಿ ಮತ್ತು ಚಂದ್ರಶೇಖರ ಇವರ ನಡುವೆ ಯಾವುದೇ ವ್ಯವಹಾರವಾಗಿಲ್ಲ ಎಂದರೆ ಅದರ ಬಗ್ಗೆ ಅವರಿಬ್ಬರನ್ನೇ ಕೇಳಬೇಕು. ಪ್ರತಿವಾದಿಯನ್ನು ನನಗೆ ಚಂದ್ರಶೇಖರ ರವರು ಪರಿಚಯ ಮಾಡಿಸಿಲ್ಲ ಎಂದರೆ ಇಲ್ಲ, ಅವರೇ ನನ್ನನ್ನು ಪ್ರತಿವಾದಿಯ ಆಫೀಸಿಗೆ ಕರೆದುಕೊಂಡು ಹೋಗಿ ಪ್ರತಿವಾದಿಯನ್ನು ಪರಿಚಯ ಮಾಡಿಸಿದ್ದರು. ಯಾವ ದಿನಾಂಕದಂದು ಪರಿಚಯ ಮಾಡಿಸಿದ್ದರು ಎಂದು ನನಗೆ ನೆನಪಿಲ್ಲ. ನಾನು

ಸದರಿ ಆಫೀಸಿಗೆ ಹೋಗಿದ್ದು ನಿಜವೇ ಆಗಿದ್ದಲ್ಲಿ ನನಗೆ ದಿನಾಂಕ ಮಂತ್ತು ಸಮಯ ಹೇಳಲು ಆಗುತ್ತಿತ್ತು ಎಂದರೆ ನಾನು ಬೆಳಿಗ್ಗೆ ಮಧ್ಯಾಹ್ನ ಮತ್ತು ಸಾಯಂಕಾಲ ಎಲ್ಲಾ ವೇಳೆಯಲ್ಲೂ ಅಲ್ಲಿಗೆ ಹೋಗಿದ್ದೆ. ನಾನು 7-8 ಬಾರಿ ಪ್ರತಿವಾದಿಯ ಆಫೀಸಿಗೆ ಹೋಗಿದ್ದೆ. ಆ ಎಲ್ಲಾ ದಿನಾಂಕಗಳನ್ನು ಹೇಳಲು ಆಗುವುದಿಲ್ಲ. ನಾನು ಒಂದು ಬಾರಿ ಕೂಡ ಪ್ರತಿವಾದಿಯ ಆಫೀಸಿಗೆ ಹೋಗಿಲ್ಲ ಎಂದರೆ ಹೋಗಿದ್ದೇನೆ.

9) ನಿಪಿ-1 ರಲ್ಲಿ ನಮೂದಾದ ಪ್ರಕಾರ 4 ತಿಂಗಳ ನಂತರ ನೋಟಿಸ್ ಕೊಡಲು ತೊಂದರೆ ಇರಲಿಲ್ಲ ಎಂದರೆ ಪ್ರತಿವಾದಿ ನನಗೆ ಸಿಕ್ಕುತ್ತಲೇ ಇದ್ದಿದ್ದರಿಂದ ನೋಟಿಸ್ ಕೊಡುವ ಪ್ರಶ್ನೆ ಬಂದಿರಲಿಲ್ಲ. ಪ್ರತಿವಾದಿ ಬಿ.ಇ.ಎಲ್. ಆಸ್ಪತ್ರೆ ಬಳಿಗೆ ಬರುವಂತೆ ನನಗೆ ಫೋನ್ ಮಾಡಿದ್ದರು, ನಾನು ಅಲ್ಲಿಗೆ ಹೋದಾಗ ಸುಮಾರು 2 ಘಂಟೆ ಕಾಲ ನನ್ನ ಜೊತೆ ಮಾತನಾಡಿದ್ದರು. ಬಿ.ಇ.ಎಲ್. ಆಸ್ಪತ್ರೆ ಹತ್ತಿರವೇ ನನಗೆ ಪ್ರತಿವಾದಿಯು 4-5 ಬಾರಿ ಸಿಕ್ಕಿದ್ದರು. ಯಾವ ಯಾವ ದಿನಾಂಕಗಳಂದು ಹೇಳಲು ಆಗುವುದಿಲ್ಲ. ಪ್ರತಿವಾದಿಯು ಉದ್ಯೋಗ ಕೊಡಿಸುತ್ತೇನೆ ಎಂದು ಹೇಳಿದ ಅಪಾದನೆ ಮೇಲೆ ಪ್ರತಿವಾದಿಯ ಕಡೆಯವರನ್ನು ಪೋಲಿಸರು ಹಿಡಿದು ಕೊಂಡಿದ್ದರು, ಆ ಸಮಯದಲ್ಲಿ ಪ್ರತಿವಾದಿ ನನಗೆ ಕರೆ ಮಾಡಿದ್ದರು. ಪ್ರತಿವಾದಿಯ ಕಡೆಯ 4 ಜನ ಬಂಧಿತರ ಹೆಸರು ಹೇಳಿ ಎಂದರೆ ಅವರ ಹೆಸರುಗಳು ನನಗೆ ಗೊತ್ತಿಲ್ಲ ಆದರೆ ಪ್ರತಿವಾದಿ ನನಗೆ ಕರೆ ಮಾಡಿ ಬರುವಂತೆ ತಿಳಿಸಿದ್ದರು. ಪ್ರತಿವಾದಿ ಯಾವ ನಂಬರ್ ನಿಂದ ಕರೆ ಮಾಡಿದ್ದರು ಎಂದರೆ ಸುಮಾರು ನೂರಾರು ನಂಬರ್ ಗಳಿಂದ ಕರೆ ಮಾಡಿದ್ದರು, ನನ್ನ ಫೋನ್ ಈಗ ಕಳೆದು ಹೋಗಿದೆ. ಫೋನ್ ಕಳೆದು ಹೋದ ಬಗ್ಗೆ ದೂರು ಕೊಟ್ಟಿಲ್ಲ ಆದರೆ ಬೇರೆ ಸಿಮ್ ಕಾರ್ಡ ಪಡೆದಿದ್ದೇನೆ. ಪ್ರತಿವಾದಿಯ

ಕಡೆಯವರನ್ನು ಪೋಲಿಸರು ಬಂಧಿಸಿರಲಿಲ್ಲ ಮತ್ತು ಪ್ರತಿವಾದಿ ಅವರನ್ನು ಬಿಡಿಸಿಕೊಳ್ಳುವ ಸಲುವಾಗಿ ನನಗೆ ಕರೆ ಮಾಡಿರಲಿಲ್ಲ ಎಂದರೆ ಸರಿಯಲ್ಲ.

10) ನಾನು ಪ್ರತಿವಾದಿಗೆ ರೂ.20 ಲಕ್ಷ ಮೊತ್ತವನ್ನು ರೂ.500 ಮತ್ತು ರೂ.1,000/- ಮುಖ ಬೆಲೆಯ ಕರೆನ್ಸಿ ನೋಟುಗಳಲ್ಲಿ ಕೊಟ್ಟಿದ್ದೆ. ನಾನು ರೂ.500/- ರ ಎಷ್ಟು ನೋಟುಗಳಲ್ಲಿ ಮತ್ತು ರೂ.1,000/- ದ ಎಷ್ಟು ನೋಟುಗಳಲ್ಲಿ ಹಣ ಕೊಟ್ಟಿದ್ದೆ ಎಂದು ಗೊತ್ತಿಲ್ಲ ಆದರೆ ರೂ.20 ಲಕ್ಷ ಕೊಟ್ಟಿದ್ದೆ. ನಾನು ಹಣ ಕೊಟ್ಟಾಗ ಸಂಜೆ ಸುಮಾರು 4.30 ಘಂಟೆಯಾಗಿತ್ತು, ಆಗ ನನ್ನ ತಾಯಿ ಕೂಡ ಹಾಜರಿದ್ದರು. ನನ್ನ ತಾಯಿ ಹಾಜರಿದ್ದರು ಎಂದು ಹೇಳುತ್ತಿರುವ ಕಾರಣ, ಈ ಬಗ್ಗೆ ನನ್ನ ತಾಯಿಯ ಸಾಕ್ಷಿ ವಿಚಾರಣೆ ಮಾಡಿಸಬಹುದು ಎಂದರೆ ನನ್ನ ತಾಯಿ ಹಣ ಕೊಡುವ ವಿಚಾರದಲ್ಲಿ ತಲೆ ಹಾಕುವುದಿಲ್ಲ ಆದ್ದರಿಂದ ಅವರ ವಿಚಾರಣೆ ಮಾಡುವ ಅಗತ್ಯವಿರುವುದಿಲ್ಲ. ರೂ.20 ಲಕ್ಷ ಹಣವನ್ನು ಬ್ಯಾಂಕಿನಿಂದ ನಾನು ಹೋಗಿ ತೆಗೆದಿರಲಿಲ್ಲ. ಸದರಿ ರೂ.20 ಲಕ್ಷ ನನ್ನ ಸ್ನೇಹಿತ ಕೆ. ಜೆ. ಪ್ರವೀಣನ ಮುಖಾಂತರ ನನಗೆ ಬಂದಿತ್ತು. ನಾನೇ ಹೋಗಿ ಪ್ರವೀಣನಿಂದ ಕ್ಯಾಶ್ ತೆಗೆದುಕೊಂಡು ಬಂದಿದ್ದೆ. ಪ್ರತಿವಾದಿಗೆ ಹಣ ಕೊಟ್ಟ ದಿನಾಂಕದಿಂದ ಒಂದು ವಾರದ ಹಿಂದೆ ಪ್ರವೀಣನಿಂದ ನಾನು ಹಣ ಪಡೆದುಕೊಂಡು ಬಂದಿದ್ದೆ. ಕೆ. ಜೆ. ಪ್ರವೀಣನಿಗೆ ರೂ.20 ಲಕ್ಷ ಹೇಗೆ ಬಂದಿತ್ತು ಎಂಬ ಬಗ್ಗೆ ದಾಖಲೆ ಹಾಜರು ಪಡಿಸುತ್ತೀರಾ? ಎಂಬ ಪ್ರಶ್ನೇಗೆ ಸಾಕ್ಷಿಗೆ ಸಮಂಜಸವಲ್ಲವೆಂದು ನಿರಾಕರಿಸಲಾಗಿದೆ. ಕೆ. ಜೆ. ಪ್ರವೀಣನನ್ನು ಸಾಕ್ಷಿಯಾಗಿ ವಿಚಾರಣೆ ಮಾಡಲು ತೊಂದರೆ ಇಲ್ಲ ಎಂದರೆ ಆತನನ್ನು ಕೇಳಿ ಹೇಳುತ್ತೇನೆ. ನಿಪಿ-1 ರಲ್ಲಿ ಕೆ. ಜೆ. ಪ್ರವೀಣ ಹಣ ಕೊಟ್ಟ ಬಗ್ಗೆ ಬರೆದಿಲ್ಲ ಎಂದರೆ ಈ ದಾಖಲೆಗೂ ಕೆ. ಜೆ. ಪ್ರವೀಣನಿಗೂ ಸಂಬಂಧವಿಲ್ಲವಾದ್ದರಿಂದ ಬರೆಯುವ ಅಗತ್ಯವಿಲ್ಲ.

11) ನನಗೆ ಲೊಕೇಶ್ ಮತ್ತು ಆಸಿಫ್ ಎನ್ನುವವರ ಪರಿಚಯವಿರುವುದಿಲ್ಲ. ನಾನು ಸದರಿ ಲೊಕೇಶ್ ಮತ್ತು ಆಸಿಫ್ ರವರ ಜೊತೆ ಶಾಮೀಲಾಗಿ ಪ್ರತಿವಾದಿಗೆ ಸೇರಿದ ಕರೂರು ವೈಶ್ಯ ಬ್ಯಾಂಕ್ ಖಾತೆಯಿಂದ ಸಹಿ ಫೋರ್ಜರಿ ಮಾಡಿ ರೂ.5 ಲಕ್ಷ ಮತ್ತು ರೂ.8 ಲಕ್ಷ ಮೊತ್ತಗಳನ್ನು ಪಡೆದಿದ್ದೇನೆ ಎಂದರೆ ಆ ರೀತಿ ಇದ್ದರೆ ದೂರು ಕೊಡಿ. ನನಗೆ ಗಾಂಧಿ ನಗರದ ಕೃಷ್ಣಪ್ಪನ ಪರಿಚಯವಿದೆಯೇ? ಎಂದರೆ ಇಲ್ಲ. ನಿಪಿ-3 ರಿಂದ ನಿಪಿ-8 ದಾಖಲೆಗಳನ್ನು ಪ್ರತಿವಾದಿಯು ಗಾಂಧಿ ನಗರದ ಕೃಷ್ಣಪ್ಪನ ಬಳಿ ಅಡವಿಟ್ಟು ಸಾಲ ಪಡೆದಿದ್ದರು ಎಂದರೆ ನನಗೆ ಅವರು ಯಾರು ಎಂದು ಗೊತ್ತಿಲ್ಲ. ಸದರಿ ಕೃಷ್ಣಪ್ಪ ಪ್ರತಿವಾದಿ ರೂ.5 ಲಕ್ಷ ವಾಪಸ್ಸು ಕೊಟ್ಟ ನಂತರ ದಾಖಲೆ ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರು ಆದರೆ ಅಷ್ಟರಲ್ಲಿ ನಾನು ಮತ್ತು ಆಸಿಫ್ ಆ ದಾಖಲೆಗಳನ್ನು ತೆಗೆದುಕೊಂಡು ಬಂದಿದ್ದೇವೆ ಎಂದರೆ ಇವೆಲ್ಲಾ ಸುಳ್ಳು ಇರುತ್ತದೆ. ನಿಪಿ-3 ರಿಂದ ನಿಪಿ-8 ಕೃಷ್ಣಪ್ಪನ ವಶದಲ್ಲಿ ಇದ್ದವು, ಅವು ಕಳೆದು ಹೋದ ಬಗ್ಗೆ ಆತ ದೂರು ಕೊಟ್ಟಿದ್ದಾನೆ ಎಂದರೆ ಅದರ ಬಗ್ಗೆ ಆತನನ್ನೇ ಕೇಳಬೇಕು. ಪ್ರತಿವಾದಿಗೆ ನೀಡಿದ ನೋಟಿಸ್ ಜಾರಿಯಾಗಿಲ್ಲ ಎಂದರೆ ಅದರ ಬಗ್ಗೆ ನನ್ನ ವಕೀಲರನ್ನು ಕೇಳಬೇಕು. ಪ್ರತಿವಾದಿಗೆ ಜಾರಿಯಾಗಿದ್ದಲ್ಲಿ ಆಕೆ ರಿಪ್ಲ್ಯಾ ನೋಟಿಸ್ ಕೊಡುತ್ತಿದ್ದರು ಎಂದರೆ ಅದನ್ನು ನನ್ನ ವಕೀಲರಿಗೆ ಕೇಳಬೇಕು. ನಿಪಿ-2 ಕ್ರಯಪತ್ರವನ್ನು ಪ್ರತಿವಾದಿಯು ದಿನಾಂಕಃ 01.03.2016 ರಂದು ನನ್ನ ವಶಕ್ಕೆ ಕೊಟ್ಟಿದ್ದರು. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ನ್ನು ದಿನಾಂಕಃ 23.09.2016 ರಂದು ಪಡೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರ 1 ನೇ ಪೇಜ್ ನಲ್ಲಿ ಇರುವ ರೂಪಾ ರವರ ಸಹಿ 2 ನೇ ಪೇಜ್ ನಲ್ಲಿರುವ ಸಹಿಗಿಂತ ಭಿನ್ನವಾಗಿದೆ ಎಂದರೆ ಅದರ ಬಗ್ಗೆ ಅವರನ್ನೇ ಕೇಳಬೇಕು. ಈ ಸಹಿಗಳು ಪ್ರತಿವಾದಿಯ ಸಹಿಗಳಲ್ಲ, ನಾನು ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

ಸದರಿ ಸಹಿಯನ್ನು ಕೈ ಬರಹ ತಜ್ಞರಿಗೆ ಕಳುಹಿಸಿ ಕೊಡಲು ನನಗೆ ಆಕ್ಷೇಪಣೆ ಇಲ್ಲ. ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ನಮೂದಿಸಿರುವ "ಎ" ಷೆಡ್ಯೂಲ್ ಆಸ್ತಿಯ ದಾಖಲೆಗಳು ಯಾವುವು ಎಂದು ಹೇಳಲು ಆಗುತ್ತದೆಯೇ? ಎಂದರೆ ಅದರ ಬಗ್ಗೆ ವಕೀಲರನ್ನು ಕೇಳಬೇಕು. ದಾವಾ ಸ್ವತ್ತು 1620 ಅಡಿ ಇದ್ದು, ಪೂರ್ವ-ಪಶ್ಚಿಮ 54 ಅಡಿ ಮತ್ತು ಉತ್ತರ-ದಕ್ಷಿಣ 30 ಅಡಿ ಇರುತ್ತದೆ. ಅದರ ಖಾತಾ ನಂ.2770/1 ಇರುತ್ತದೆ ಎಂದು ಸಾಕ್ಷಿಯವರೇ ಸ್ವತಃ ವಿವರಗಳನ್ನು ಹೇಳಿರುತ್ತಾರೆ. ನಾನು ಹೇಳುತ್ತಿರುವ ಖಾತಾ ನಂಬರ್ ಸರಿ ಇಲ್ಲ ಎಂದರೆ ನನಗೆ ಗೊತ್ತಿರುವುದನ್ನು ನಾನು ಹೇಳಿದ್ದೇನೆ. ನನಗೆ ಮತ್ತು ಪ್ರತಿವಾದಿಗೆ ಯಾವುದೇ ವ್ಯವಹಾರವಾಗಿಲ್ಲ ಮತ್ತು ನಾನು ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನನ್ನು ಯಾವತ್ತೂ ಹಣ ಕೇಳಿಲ್ಲ ಎಂದರೆ ಕೇಳಿದ್ದಾರೆ. ನಾನು ಲೋಕೇಶ್ ಮತ್ತು ಆಸಿಫ್ ನಿಪಿ-1 ನ್ನು ಸೃಷ್ಟಿಸಿ ಕೃಷ್ಣಪ್ಪನಿಂದ ದಾಖಲೆ ಪಡೆದುಕೊಂಡು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲವೆಂದರೆ ವಕೀಲರಿಂದ ಓದಿಸಿ ತಿಳಿದುಕೊಂಡಿದ್ದೇನೆ. ನಾನು ಪ್ರತಿವಾದಿಗೆ ಯಾವ ದಿನಾಂಕದಂದು ನೋಟಿಸ್ ಕಳುಹಿಸಿದ್ದೆ ಎಂದರೆ ಅದನ್ನು ನನ್ನ ವಕೀಲರಿಗೆ ಕೇಳಬೇಕು. ಸದರಿ ನೋಟಿಸ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಅದರ ಬಗ್ಗೆ ನನಗೆ ಹೇಳಿದ್ದಾರೆ.

**ಮರುವಿಚಾರಣೆಃ ಇಲ್ಲ**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**